ಆರ್ ಬಿ ಐ/ 2007-2008/343
ಎಪಿ.(ಡಿಐಆರ್ ಶ್ರೇಣಿಗಳು) ಸುತ್ತೋಲೆ ಸಂ. 45 ಮೇ 30, 2008

-ಗೆ,
ಎಲ್ಲಾ ವರ್ಗ-1 ಅಧಿಕೃತ ಡೀಲರ್ ಬ್ಯಾಂಕುಗಳು ಮತ್ತು
ಅಧಿಕೃತ ಬ್ಯಾಂಕುಗಳು
ಮಾನ್ಯರೆ,

**ವಿದೇಶಿ ವಿನಿಮಯ ನಿರ್ವಹಣೆ(ಠೇವಣಿ) ನಿಯಂತ್ರಣಗಳು-2000-**
**ಅನಿವಾಸಿ(ಹೊರ) ರೂಪಾಯಿ ಖಾತೆಗಳಿಗೆ ಜಮೆ ಮಾಡುವಿಕೆ**

ಕಾಲಕಾಲಕ್ಕೆ ತಿದ್ದುಪಡಿ ಮಾಡಲ್ಪಡುವ, ವಿದೇಶಿ ವಿನಿಮಯ ನಿರ್ವಹಣೆ(ಠೇವಣಿ) ನಿಯಂತ್ರಣಗಳು-2000-(ಅಧಿಸೂಚನೆ ಸಂ.ಫೆಮಾ 5/2000-ಆರ್ ಬಿ ದಿನಾಂಕ ಮೆ 03, 2000) ಇದರ ಅನುಸೂಚನೆ 1 ರ ಪ್ಯಾರಾ 3 ರಲ್ಲಿ ಸೂಚಿತವಾಗಿರುವ ಅನಿವಾಸಿ(ಹೊರ) ರೂಪಾಯಿ ಖಾತೆಗೆ ಅನುಮತಿ ನೀಡಿರುವ ಜಮಾವಣೆಯ ಬಗ್ಗೆ ಅಧಿಕೃತ ಡೀಲರ್-ವರ್ಗ-1(ಎಡಿ ವರ್ಗ-1) ಬ್ಯಾಂಕುಗಳ ಗಮನವನ್ನು ಇಲ್ಲಿ ಸೆಳೆಯಲಾಗಿದೆ.ಮುಂದುವರಿದು, ದಿನಾಮ್ಕ ಅಕ್ಟೋಬರ್ 17, 2007 ರ ಸುತ್ತೋಲೆ ಸಂ.14 ರ ಕಪ್ಪು ಹಣ ಚಲಾವಣೆ ತಡೆ(ಆಂಟಿ-ಮನಿ ಲಾಂಡರಿಂಗ್) ಮಾರ್ಗಸೂಚಿಗಳು(ಎಪಿ-ಡಿಐಆರ್ ಶ್ರೇಣಿಗಳು) ಇವುಗಳ ಅಡಿಯಲ್ಲಿ, ಎಫ್ ಎಫ್ ಎಂ ಸಿ ಗಳು ಯು.ಎಸ್.ಡಾಲರ್ 3000ದವರೆಗೆ ಅಥವಾ ಅದರ ಸಮ ಮೊತ್ತಕ್ಕೆ ಮಾತ್ರ ವಿದೇಶಿ ಕರೆನ್ಸಿಯನ್ನು ಪಡೆಯಬಹುದು ಮತ್ತು ಆವರೆಗೆ ನಗದು ಪಾವತಿ ಮಾಡಬಹುದು. ಯು.ಎಸ್.ಡಾಲರ್ 3000ಕ್ಕೂ ಹೆಚ್ಚು ಅಥವಾ ಅದಕ್ಕೆ ಸರಿಸಮನಾದ ಮೊತ್ತವನ್ನು ಡಿಮ್ಯಾಂಡ್ ಡ್ರಾಫ್ಟ್ ಅಥವಾ ಬ್ಯಾಂಕರ್ಸ್ ಚೆಕ್ ಮೂಲಕ ಪಾವತಿಸಬೇಕು.

2. ಉದಾರೀಕರಣದ ಕ್ರಮವಾಗಿ ಮತ್ತು ಜತೆಗೆ ಎನ್‌ಆರ್‌ಇ ಖಾತೆದಾರರ ಪ್ರಾಮಾಣಿಕ ಅಗತ್ಯಗಳನ್ನು ಪೂರೈಸಲು, ಎಡಿ ವರ್ಗ-1 ಬ್ಯಾಂಕುಗಳು ಮತ್ತು ಅಧಿಕೃತ ಬ್ಯಾಂಕುಗಳು ಎನ್‌ಆರ್‌ಇ ಖಾತೆದಾರನಿಗೆ ನೀಡಿರುವ ಪತ್ರಗಳು ಎಡಿ ವರ್ಗ-1/ವರ್ಗ-2, ನೀಡಿರುವ ನಗದು ಪ್ರಮಾಣ ಪತ್ರದ ಬೆಂಬಲದೊಂದಿಗೆ, ಎನ್‌ಆರ್‌ಇ ಖಾತೆದಾರನ ಎನ್‌ಆರ್‌ಐ ಖಾತೆಗೆ ವಿದೇಶಿ ಕರೆನ್ಸಿಯ ನಗದು ಪಡೆಯುವಿಕೆಯ ಮೇಲೆ ನೀಡಿರುವ ಡಿಮ್ಯಾಂಡ್ ಡ್ರಾಫ್ಟ್‌ಗಳು/ಬ್ಯಾಂಕರ್ ಚೆಕ್ಕುಗಳ ಉತ್ಪನ್ನಗಳನ್ನು ಜಮೆ ಮಾಡಬಹುದು.

3. ಎ ಡಿ-ವರ್ಗ-1 ಬ್ಯಾಂಕರುಗಳು ಮತ್ತು ಅಧಿಕೃತ ಬ್ಯಾಂಕುಗಳು ಈ ಸುತ್ತೋಲೆಯ ಅಂಶಗಳನ್ನು ಅವರ ಸಂಬಂಧಿತ ಘಟಕಗಳ ಗಮನಕ್ಕೆ ತರಬಹುದು.

4. ವಿದೇಶಿ ವಿನಿಮಯ ನಿರ್ವಹಣಾ ಕಾಯಿದೆ, 1999 (1999ರ 42) ಯ ಪ್ರಕರಣಗಳು 10(4) ಮತ್ತು 11(1) ರ ಅಡಿಯಲ್ಲಿ ಈ ಸುತ್ತೋಲೆಯಲ್ಲಿರುವ ನಿರ್ದೇಶನಗಳನ್ನು ನೀಡಲಾಗಿದ್ದು ಮತ್ತು ಯಾವುದೇ ಕಾನೂನಿನ ಅಡಿಯಲ್ಲಿ ಅಗತ್ಯವಿರಬಹುದಾದ ಅನುಮತಿ/ಅನುಮೋದನೆಗಳಿಗೆ ಪೂರ್ವಾಗ್ರಹ ಪೀಡಿತವಾಗಿರುವುದಿಲ್ಲ.

ನಿಮ್ಮವಿಶ್ವಾಸಿ,

(ಸಲೀಂ ಗಂಗಾಧರನ್)
ಮುಖ್ಯ ಪ್ರಧಾನ ವ್ಯವಸ್ಥಾಪಕರು (ಪ್ರಭಾರಿ)